ಸಾಕ್ಷಿಯನ್ನು ದಿಃ **09.01.2024** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ 2 ಮತ್ತು 3ನೇ ಪ್ರತಿವಾದಿಗಳ ಪರ ಶ್ರೀ ಸಿ.ಆರ್. ವಕೀಲರಿಂದಃ-

ನನ್ನ ತಂದೆ ನಾನು ಚಿಕ್ಕವಯಸ್ಕನಾಗಿದ್ದಾಗಲೇ ತೀರಿ ಹೋಗಿದ್ದಾರೆ. ಅವರು ಮರಣ ಹೊಂದಿ ಅಂದಾಜು 50 ವರ್ಷ ಆಗಿದೆಯಾ ಎಂದರೆ ನನಗೆ ನೆನಪಿಲ್ಲ. ನನ್ನ ತಾಯಿ 2005ನೇ ಸಾಲಿನಲ್ಲಿ ತೀರಿಕೊಂಡಿದ್ದಾರೆ. ನನ್ನ ತಂದೆ ಮತ್ತು ನನ್ನ ತಾಯಿಯ ಮರಣ ಪ್ರಮಾಣ ಪತ್ರಗಳನ್ನು ಹಾಜರುಪಡಿಸಿದ್ದೇನಾ ಎಂದರೆ ತಾಯಿಯ ಮರಣ ಪ್ರಮಾಣಪತ್ರ ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿನ ಸರ್ವೇ ನಂ.50 ಆಗಿದ್ದು ಅದರ ವಿಸ್ತೀರ್ಣ 2 ಎಕರೆ 30 ಗಂಟೆ ಇದೆ. ದಾವಾ 2 ಎಕರೆ 30 ಗುಂಟೆ ಸ್ವತ್ತನ್ನು ನನ್ನ ತಾಯಿ ಬದುಕಿದ್ದಾಗಲೇ ಎಸಿ ಕಚೇರಿಯಿಂದ ಅನ್ಯಕ್ರಾಂತ ಮಾಡಿಸಲಾಗಿತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು 65/97-98ರಡಿ ದಿನಾಂಕ 06.08.1997ರಂದೇ ಅನ್ಯಕ್ರಾಂತ ಮಾಡಿಸಲಾಗಿದೆ ಎಂದರೆ ಸರಿಯಲ್ಲ.

ಕಾಳಯ್ಯ ಉಃ ಕೆಂಪರಸಯ್ಯ ನನಗೆ ತಾತನಾಗಬೇಕು. ಸಾಕ್ಷಿಗೆ ನಿಪಿ-3ರ ಅಡಿ ಗುರುತಿಸಲ್ಪಟ್ಟಿರುವ ಪಹಣಿ ಪತ್ರಿಕೆಗಳ ಪೈಕಿ 1995-96 ರಿಂದ 1999-2000ವರೆಗಿನ ಪಹಣಿ ಪತ್ರಿಕೆಗಳನ್ನು ತೋರಿಸಿ ಇವುಗಳನ್ನು ನಾನೇ ಹಾಜರುಪಡಿಸಿದ್ದೇನಾ ಎಂದರೆ ನನಗೆ ಗೊತ್ತಿಲ್ಲ ಇವುಗಳನ್ನು ನಾನು ಹಾಜರುಪಡಿಸಿಲ್ಲ ಎನ್ನುತ್ತಾರೆ. ದೊಡ್ಡಕಾಡನಹಳ್ಳಿ ಗ್ರಾಮದ ಸರ್ವೇ ನಂ. 50 ವಿಸ್ತೀರ್ಣ 2 ಎಕರೆ 31 ಗುಂಟೆ ಪೈಕಿ 1 ಎಕರೆ 31 ಗುಂಟೆ ಚೆನ್ನಮ್ಮ ಕೊಂ ಲೇಟ್ ಹಲಗಯ್ಯ, ಕಾಳಯ್ಯ ಉ ಕೆಂಪರಸಯ್ಯನವರಿಗೆ 1 ಎಕರೆ ಸ್ವತ್ತು ಎಂ.ಆರ್.20/96-97 ರಂತೆ ಖಾತೆ ಆಗಿದೆ ಎಂದರೆ ಸರಿಯಲ್ಲ. ಆ ರೀತ್ಯಾ ತಮ್ಮ ಹೆಸರಿಗೆ ಖಾತೆ ಬಂದಿದ್ದ ಸ್ವತ್ತನ್ನು ಚನ್ನಮ್ಮ ಮತ್ತು ಕಾಳಯ್ಯ ಉಃ ಕೆಂಪರಸಯ್ಯರವರು ಎಎಲ್ಎನ್ ನಂ.65/97-98ರಲ್ಲಿ ದಿನಾಂಕ 07.08.1997ರಂದು ಅನ್ಯಕ್ರಾಂತ ಮಾಡಿಸಿದ್ದಾರೆ ಎಂದರೆ ನಮ್ಮ ತಾಯಿ ಮಾಡಿಸಿಲ್ಲ. ಈ ರೀತಿ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಾಡಿಸಿದ ಸ್ವತ್ತನ್ನು ಅಭಿವೃದ್ಧಿ ಪಡಿಸಲು ಕಷ್ಟವಾಗುತ್ತದೆ ಎಂದು ಹಾಗೂ ಹಿಂದೆ ಮಾಡಿದ ಸಾಲ ತೀರಿಸಲು ಹಾಗೂ ಮಕ್ಕಳನ್ನು ಸಾಕಲು ಆರ್ಥಿಕ ತೊಂದರೆ ಇದೆ ಎಂದು ಅನ್ಯಕ್ರಾಂತ ಮಾಡಿಸಿದ ಸ್ವತ್ತನ್ನು ಪ್ರತಿವಾದಿ 2 ಮತ್ತು 3ರವರಿಗೆ

ದಿನಾಂಕ 07.08.1997ರಂದು ನಿಪಿ–5ರಂತೆ ಮಾರಾಟ ಮಾಡಿದ್ದಾರೆ ಎಂದರೆ, ನಮ್ಮ ತಾಯಿ ಮಾರಾಟ ಮಾಡಿಲ್ಲ, ನಮಗೆ ಒಂದು ರೂಪಾಯಿ ಕೂಡ ನೀಡಿಲ್ಲ ಎಂದು ಸಾಕ್ಷಿ ಸ್ವಯಂ ನುಡಿಯುತ್ತಾರೆ. ಈ ರೀತಿ ಮಾರಾಟ ಮಾಡಿದಾಗ ಮಾರಾಟದ ಮೊಬಲಗನ್ನು ಚನ್ನಮ್ಮ ಮತ್ತು ಕಾಳಯ್ಯ ಉಃ ಕೆಂಪರಸಯ್ಯರವರು ನಮ್ಮ ತಾಯಿ ರೂ.70,000/- ನಗದು ರೂಪದಲ್ಲಿ ಮತ್ತು ಉಳಿಕೆ ರೂ.68,750/-ಗಳನ್ನು ಚೆಕ್ ನಂ 399052 ದಿನಾಂಕ 07.08.1997ರಂತೆ ಎಸ್.ಬಿ.ಎಂ. ಎಂ.ಸಿ.ಇ. ಶಾಖೆ ಮೈಸೂರು ಈ ಚೆಕ್ ಮೂಲಕ ಪಡೆದುಕೊಂಡಿದ್ದಾರೆ ಎಂದರೆ ನಮ್ಮ ತಾಯಿಗೆ ಯಾವುದೇ ಬಾಂಕ ವ್ಯವಹಾರ ಗೊತ್ತಿರಲಿಲ್ಲ ಅದು ಹೇಗೆ ಪಡೆದುಕೊಳ್ಳುತ್ತಾರೆ, ಇದೆಲ್ಲ ಸುಳ್ಳು ಎನ್ನುತ್ತಾರೆ.

ವಾದ ಪತ್ರದಲ್ಲಿ ನನಗೆ ಏನು ಬರೆದಿದೆ ಎಂದು ನನಗೆ ಗೊತ್ತಾ ಎಂದರೆ ನಾನು ಯಾವುದೇ ಪತ್ರವನ್ನು ಬರೆಸಿ ಹಾಕಿಲ್ಲ, ನನಗೇನೂ ಗೊತ್ತಿಲ್ಲ. ನಾನು ನನ್ನ ವಾದ ಪತ್ರದ 8 ನೇ ಕಂಡಿಕೆಯಲ್ಲಿ ದಾವಾ ಸ್ವತ್ತಿಗೆ ನಾನು ಮಾಲೀಕ, ಹಕ್ಕು ಮತ್ತು ಸ್ವಾಧೀನ ಹೊಂದಿದ್ದೇನೆ ಎಂದು ಬರೆಸಿ ಹಾಕಿಸಿದ್ದೇನೆ ಎಂದರೆ, ಸುಳ್ಳು ನಾನು ಹೇಳಿಲ್ಲ, ಆ ರೀತಿ ನಾನು ಯಾವುದೇ ಪತ್ರ ಬರೆಸಿಲ್ಲ ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.